ಸಿ.ಸಿ .ನಂ. 141/2018 ಪಿಡಬ್ಲೂಃ 1

ದಿನಾಂಕಃ 6-8-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಅರ್ಜಿಯ ಆದೇಶದ ಮೇರೆಗೆಃ ಆರೋಪಿ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

1. ಆರೋಪಿಯು ದಿಃ 12-08-2014 ರಂದು ಉದ್ರಿ ಸಾಲಕ್ಕೆ ಅರ್ಜಿ ಸಲ್ಲಿಸಿರುತ್ತಾರೆ . ಆ ಸಂದರ್ಭದಲ್ಲಿ ನಾನು ಫಿರ್ಯಾದುದಾರ ಸಂಘದಲ್ಲಿ ಕಾರ್ಯದರ್ಶಿಯಾಗಿರಲಿಲ್ಲ ಎಂದರೆ ಸಾಕ್ಷಿಯು ಆ ಸಂದರ್ಭದಲ್ಲಿ ತಾನು ಗುಮಾಸ್ತನಾಗಿದ್ದೆನು ಎಂದು ನುಡಿಯುತ್ತಾರೆ . ಸ್ಧ್ರಿ ಸಾಲಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಗೂ ಅಂತಹ ದಾಖಲೆಗಳಿಗೆ ಸಹಿಗಳನ್ನು ಆ ಸಂದರ್ಭದಲ್ಲಿ ಇದ್ದಂತಹ ಕಾರ್ಯದರ್ಶಿಯವರೆ ಪಡೆದುಕೊಳ್ಳಬೇಕು ಎಂದರೆ ಸರಿ . ಆ ಸಂದರ್ಭದಲ್ಲಿ ಕಾರ್ಯದರ್ಶಿಯಾಗಿದ್ದ ನಾರಾಯಣ ಸಣ್ಣು ಮೂಡಂಗಿ ರವರು ಯಾವ ಯಾವ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಸಾಲಕ್ಕೆ ಅರ್ಜಿಯನ್ನು ಕೊಟ್ಟ ನಂತರ ನಮ್ಮ ಸಂಘದಲ್ಲಿ ಒಂದು ಠರಾವು ಆಗುತ್ತದೆ ಎಂದರೆ ಸರಿ . ಈ ಕೇಸಿನ ಸಾಲಕ್ಕೆ ಸಂಬಂಧಪಟ್ಟಂತೆ ಠರಾವು ದಿಃ 20-08-2014 ರಂದು ಆಗಿರುತ್ತದೆ . ಸದರಿ ಠರಾವಿನಲ್ಲಿ ಸಾಲದ ಮಿತಿ ನಮೂದಾಗಿತ್ತು ಎಂದರೆ ಸರಿ . ಸದರಿ ಠರಾವಿನಲ್ಲಿ ಸಾಲದ ಸಾಲಮಿತಿಯನ್ನು ನಮೂದು ಮಾಡಲಾಗಿದೆ ಎಂದರೆ ಸರಿ . ಸದರಿ ಠರಾವಿನ ಪ್ರಕಾರ ಸಾಲ ಮಿತಿ 30 ಲಕ್ಷ ರೂಪಾಯಿ ಆಗಿರುತ್ತದೆ . ಸದರಿ ಸಾಲದ ಕಾಲಮಿತಿ ಅಗಷ್ಟ 1 ರಿಂದ ಮುಂದಿನ ಜುಲೈ 31 ರ ತನಕ ಇರುತ್ತದೆ .

2. ಎಲ್ಲಾ ಸಂಘಗಳಿಗೆ ಇರುವಂತೆ ನಮ್ಮ ಸಂಘಕ್ಕೂ ಒಂದು ಬೈ ಲಾ ಇದೆ ಎಂದರೆ ಸರಿ . ಸದರಿ ಬೈ ಲಾ ದಲ್ಲಿ ಮುಂಗಡ ಹಣ ಪಡೆಯುವ ಬಗ್ಗೆ ನಮೂದು ಇಲ್ಲಾ ಎಂದರೆ ಸರಿಯಲ್ಲ . ಉದ್ರಿ ಸಾಲವನ್ನು ಪ್ರಾರಂಭಿಸಿದ ನಂತರ ಆರೋಪಿಯ ಹತ್ತಿರ ಮೂರು ಲಕ್ಷ ರೂಪಾಯಿ ಹಣವನ್ನು ಮೀನು ಖರೀದಿ

ಭದ್ರತಾ ಅಡ್ವಾನ್ಸ ಎಂದು ತೆಗೆದುಕೊಂಡಿರುತ್ತೇವೆ . ನಾವು ಪರ್ಶಿಯನ್ ಬೋಟಿನವರಿಗೆ , ಸದರಿ ಬೋಟಿನಿಂದ ಸಿಗುವಂತಹ ಮೀನನ್ನು ನಮಗೆ ಕೊಡಿ ಎಂದು ಅವರಿಗೆ ಮುಂಗಡ ಹಣವನ್ನು ಕೊಡುತ್ತೇವೆ, ಅಂತಹ ಬೋಟಿನವರು ನಮಗೆ ಮೀನನ್ನು ಕೊಟ್ಟ ನಂತರ ನಾವು ಅದನ್ನು ಹರಾಜು ಮಾಡಿ ಮೀನು ಉದ್ರಿ ಸಾಲಗಾರರಿಗೆ ಮಾರಾಟ ಮಾಡುತ್ತೇವೆ . ಆ ರೀತಿ ಖರೀದಿ ಮಾಡಿದವರಿಗೆ ನಾವು ರಸೀದಿಯನ್ನು ಕೊಡುತ್ತೇವೆ ಎಂದರೆ ಸರಿ . ಆ ರೀತಿ ಆರೋಪಿಯು ನಮ್ಮ ಮೂಲಕ ಎಷ್ಟು ಸಲ ಮೀನು ಖರೀದಿ ಮಾಡಿರುತ್ತಾರೆ ಹಾಗೂ ಎಷ್ಟು ಮೊತ್ತಕ್ಕೆ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ , ಅದು ಸ್ಟೇಟ್ ಮೆಂಟ್ ಆಪ್ ಅಕೌಂಟ್ ನಲ್ಲಿ ಇದೆ ಎಂದು ಸಾಕ್ಷಿಯು ನುಡಿಯುತ್ತಾರೆ . ಆ ರೀತಿ ಆರೋಪಿಗೆ ಮೀನು ಹರಾಜು ಮಾಡಿದ ನಂತರ ಕೊಟ್ಟಿರುವ ರಸೀದಿಗಳು ನಮ್ಮ ಸಂಘದಲ್ಲಿ ಇದೆ . ಸದರಿ ರಸೀದಿಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವುಗಳನ್ನು ಹಾಜರು ಪಡಿಸಲು ಸಂಘದ ಆಡಳಿತ ಮಂಡಳಿಯ ಅನುಮತಿ ಬೇಕು ಎಂದು ನುಡಿಯುತ್ತಾರೆ . ಅಕೌಂಟ್ ಸ್ಟೇಟ್ ಮೆಂಟ್ ಮತ್ತು ಮೇಲೆ ಹೇಳಿದ ರಸೀದಿಗಳನ್ನು ತಾಳೆ ಮಾಡಿದರೆ ನಿಜಾಂಶ ಗೊತ್ತಾಗುತ್ತದೆ ಎಂದರೆ ಸಾಕ್ಷಿಯು ತಾಳೆ ಇದೆ ಎಂದು ನುಡಿಯುತ್ತಾರೆ . ಸಾಲದ ಮೊದಲನೆ ಅವಧಿಯಲ್ಲಿ ಎಷ್ಟು ಸಾಲವನ್ನು ಕೊಟ್ಟಿರುತ್ತೇವೆ ಹಾಗೂ ಎಷ್ಟು ಮರು ಪಾವತಿ ಮಾಡಿರುತ್ತಾರೆ ಎಂಬುದು ಸ್ಟೇಟ್ ಮೆಂಟ್ ಆಪ್ ಅಕೌಂಟ್ ನಲ್ಲಿ ಇದೆ .

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.